**ವೆಂಕಣ್ಣ**:— ಆಚಾರ‍್ರ ಆ ಸೂಳೀಮುಗಾ ಪೂಜೀ ಪುನಸ್ಕಾರಾ ಮಾಡ್ತಿದ್ರs, ನನ್ನ ಸಂಸಾರ ಹರಹರಕ ಆಗ್ತಿದ್ದೀ ಇಲ್ಲಾ.

**ರಂಗಾ**:— ಹೌದೋ ಯಂಕಾ, ನಿನ್ನೆ ರಾತ್ರಿ ಏನಪಾ ಅದು ಗದ್ಲಾs?

**ವೆಂಕಣ್ಣ**:— ನನ್ನ ಕರ್ಮ್ಯಾರಿ ಆಚಾರ, ನನ್ನ ಹಣೀಬರಾ (ಹಣಿ ಹಣಿ ಬಡೆದುಕೊಳ್ಳುವನು.)

**ರಂಗಾ**:— ರಸ್ತೀಕ ಬಂದ್ನಿಂತು ಕಲಾಕಲಾ ಬಾಯಿ ಮಾಡೂ ಅಂಥಾ ದ್ದೇನಾಗಿತ್ತಪಾ ನಿನಗ? ಸಂಸಾರದಾಗ ಸಹನಮಾಡಕೋಬೇಕಪಾ.

**ವೆಂಕಣ್ಣ**:— ಆಚಾರ ಒಂದss, ಎರಡss, ಎಷ್ಟಂತ ಸಹನ ಮಾಡಕೋಬೇಕ್ರೀ. ನಾಅಂತೇ ಈ ರಂಡೀಮುಕ್ಕಳ ಕೈಯ್ಯಾಗ ತಡದೀನಿ, ಮತ್ತೊಬ್ಬಾಗಿದ್ರ ಓಡಿ ಹೋಗ್ತಿದ್ರ ಓಡಿ.

**ರಂಗಾ**:— ಒಂದ್ವ್ಯಾಳ್ಯಾಕ್ಕ ಬೈಬೇಕು, ಒಂದ್ವ್ಯಾಳ್ಯಾಕ್ಕ ಬುದ್ಧಿ ಹೇಳಿ ಮುಂದಕ್ಕೆ ಕರಿಬೇಕೊ.

**ವೆಂಕಣ್ಣ**:— ಸಣ್ಣ ಕೂಸೇನ್ರಿ, ಇವರು. ಆಚಾರ ಒಟ್ರಿಸಿ ಬರ್ತದ, ನನ್ನ ಹರಕ ಸಂಸಾರಕ್ಕ ಟೆಬ್ಬೀ ಹಾಕಿ ಹಾಕಿ ಸುಮ್ಮನೆ ಕೂಡ್ತಿದ್ದೆ. ಎಲ್ಲಾ ಹೇಳ್ತೇನಿ ಕೇಳ್ರಿ, ಎಂದ್ನಿಂದೂ ನೀವು ನಮ್ಮ ಗುರುಗೋಳು. ನಿಮ್ಮುಂದ ಹೇಳ್ದೀ ಮತ್ಯಾರ ಮುಂದ ಹೇಳ್ಬೇಕು?

**ರಂಗಾ**:— ಹೌದಪಾ. ಎತ್ತ್ರಿಗೆಳಿತು, ಕ್ವಾಣ ಕೆರೀಗೆಳಿತು, ಅಂದ್ರ ಸಂಸಾರ ಸಾಗೂ ಬಗಿಹ್ಯಾಂಗಪಾ.

**ವೆಂಕಣ್ಣ**:— ಹಾಂ! ಆಚಾರ ನಾನೂ ಅದನ್ನ ಕೇಳ್ತೇನ್ರಿ. ಏನೋರಪಾ ದೊಡ್ಡವತನ ಅದ, ಹ್ಯಾಂಗಿದ್ರೇನು ಅಂತೀರಾ, ಸಿಳ್ಳೀಮಿಳ್ಳಿ ಗ೨ರೂಪಾಯಿ ಎಂಟಣೆ ಬರ್ತದನನ್ಪಾಲಿಗೆ. ರಾಯರ ಮನಿ ಘಂಟೀ, ಘಂಟೀ ಬಡದು ಪಲ್ಲ್ಯಾ ತಂದು ಇದ್ದಬಿದ್ದ ಚೂರಚಾರ ಕೆಲ್ಸಾ ಮಾಡ್ದಹೊರ್ತು, ನನ್ನ ಸಂಸಾರ ಶಕಟ ಸಾಗೂ ಹಾಂಗಿಲ್ಲಾ.

